ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ನಿರ್ದಿಷ್ಟವಾದಂಥ ಒಪಿನಿಯನ್ ಕೊಟ್ಟಿಲ್ಲ.

SRI M. C. BASAPPA.—Is it not a fact that the Advisory Committee has recommended that the State Government should take steps to move the centre to see that the Thungabhadra Board is dissolved ;

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಆ ತರಹ ನನ್ನ ಹತ್ತಿರ ವಿಷಯಾ ಇಲ್ಲ. ಬೇಕಾದರೆ ಮಾನ್ಯ ಸದಸ್ಯರಿಗೆ ನಾನು ಒದಗಿಸಿಕೊಡುತ್ತೇನೆ.

MR. SPEAKER.—The Hon'ble Minister wants some time.

Lossess to some areca Plantations of Tunnel under Sharavathi Valley Scheme.

718 L.T. THIMMAPPA HEGDE (Sagar).—Will the Chief Minister be pleased to state.—

(a) whether it has come to the notice of the Government that the areca crops inthe Upper region of the tunnels being constructed in the Sharvathy valley project area under linganamakki dam are withering due to loss of moisture in the said lands ;

(b) the action taken on the representation made by the affected agriculturists for payment of compensation ;

(c) whether the Government would take action to direct the Karnataka Power Corporation to pay at least the crop compensation to the said agricultuists immediately ?

SRI R. GUNDU RAO (Chief Minister).—

(a) Government is aware of the receipt of some representations in this behalf from the residents of the villages affected.

(b) The officers of the Karnataka Power Corporation after considering the representations, have come to the conclusion that their requests are not genuine.

(c) Does not arise in view of reply to clause (b).

ಶ್ರೀ ಎಲ್. ಟಿ. ತಿಮ್ಮಪ್ಪ ಹೆಗ್ಗಡೆ.—ಈ ಪ್ರಶ್ನೆಯಲ್ಲಿ ಕರ್ನಾಟಕ ಪವರ್ ಕಾರ್ಪೊರೇಷನ್‌ನವರು ಸುರಂಗ ಮಾರ್ಗವನ್ನು ತೋಡಿದಾಗ ಮೇಲಿರತಕ್ಕ ಅಡಿಕೆ ತೋಟಗಳ ಭೂಮಿಯು ತೇವಾಂಶ ಕಳೆದು ಹೋಗಿದೆ, ತೋಟ ಹಾಳಾಗುತ್ತಿದೆ, ಇದಕ್ಕೆ ಏನಾದರೂ ಪರಿಹಾರ ಕೊಟ್ಟಿದ್ದೀರಾ, ಅಂದರೆ ಇಲ್ಲ ಎಂದು ಹೇಳಿದ್ದೀರಿ, ಬೆಳೆ ನೋಡಿದ್ದೀರಾ ಅಂದರೆ ಪರಿಶೀಲಿಸಿ ಬೇಡಿಕೆ ಸರಿ ಇಲ್ಲ ಎಂದು ಹೇಳಿದ್ದೀರಲ್ಲ, ಹಾಗಿದ್ದರೆ, ಯಾರನ್ನು ಕೇಳಿದರೂ ತೇವಾಂಶ ಸೆಳೆದುಹೋಗುತ್ತದೆ ಎಂದು ಹೇಳುತ್ತಾರೆ. ನೀವು ಹಾಳಾಗುವುದಿಲ್ಲ ಎಂದು ಹೇಳುತ್ತೀರಿ, ಆ ರೀತಿ ಸೆಳೆದು ಹೋಗುವುದಿಲ್ಲ ಎಂದು ಹೇಳುತ್ತೀರಿ. ಎಷ್ಟು ಆರ್ಜಿಗಳು ಬಂದಿವೆ, ಎಷ್ಟು ಎಕರೆಗಳಿಗೆ ಎಫೆಕ್ಟ್ ಆಗುತ್ತದೆ ಎಂದು ಹೇಳುತ್ತೀರಾ ?

ಶ್ರೀ ಎಂ. ವೀರಪ್ಪ ಮೊಯ್ಲಿ.—(ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ) ಸನ್ಮಾನ್ಯ ಅಧ್ಯಕ್ಷರೆ, ಸುರಂಗ ಮಾರ್ಗ ಭೂಮಿಯಿಂದ ಸುಮಾರು ೧೬೦ ಅಡಿ ಕೆಳಗಡೆ ಇದೆ, ಆವರು ಯಾವ ತೋಟ ಎಂದು ಹೇಳುತ್ತಾರೆ, ಆದು ೮೦೦ ಅಡಿ ದೂರದಲ್ಲಿದೆ. ಸುರಂಗ ಮಾರ್ಗವನ್ನು ಮಾಡುವಾಗ ಲೈನಿಂಗ್ ಮಾಡಿವ್ವಾರೆ, ಲೈನಿಂಗ್ ಮಾಡಿದ ಮೇಲೆ ತೇವಾಂಶ ಹೋಗುವಂಥ ಪ್ರಶ್ನೆ ಬರುವುದಿಲ್ಲ. ಲೈನಿಂಗ್ ಮಾಡದೇ ಇದ್ದರೆ ಮಾನ್ಯ ಸದಸ್ಯರು ಹೇಳಿದಹಾಗೆ ಆಗಬಹುದು: ಸುರಂಗ ಮಾರ್ಗದಲ್ಲಿ ೧೦೦ ಕ್ಕೆ ೯೦ ಪಾಲು ವರ್ಕ್ ಮುಗಿದಿದೆ, ಇನ್ನು ಒಂದು ತಿಂಗಳಲ್ಲಿ ಸುರಂಗ ಮಾರ್ಗದ ಕೆಲಸ ಮುಗಿಯುತ್ತದೆ. ಆದುದರಿಂದ ಸುರಂಗದ ಕೆಲಸ ಆಗುತ್ತಿರುವಾಗ ಲೈನಿಂಗ್ ಮಾಡಿದ್ದರಿಂದ ತೇವಾಂಶ ಕಡಿಮೆಯಾಗುವಂತಹ ಪ್ರಶ್ನೆ ಉಳಿದಿಲ್ಲವೆಂದು ಉತ್ತರಿಸಿದ್ದೇವೆ.

ಶ್ರೀ ಕೆ. ಎಂ. ತಮ್ಮಯ್ಯ.—ತೋಟಗಳನ್ನು ಪರಿಶೀಲನೆ ಮಾಡಿದಾಗ ಸುರಂಗದ ಮೇಲಿನ ತೋಟಗಳು ಒಣಗಿದ್ದು ಬಾಕಿ ತೋಟಗಳು ಒಣಗದೆ ಇದ್ದುದು ಕಾಣಲಿಲ್ಲವೇ ?

ಅಧ್ಯಕ್ಷರು.—ಭೂಮಿಗಿಂತ ಸುರಂಗ ಕೆಳ ಭಾಗದಲ್ಲಿ ಇದೆ. ಮತ್ತು ಲೈನಿಂಗ್ ಮಾಡಿರುವುದರಿಂದ ನೀರನ್ನು ಎಳೆದುಕೊಳ್ಳತಕ್ಕ ಪರಿಸ್ಥಿತಿ ಉದ್ಭವಿಸಿಲ್ಲವೆಂದರು,

ಶ್ರೀ ಕೆ. ಎಂ. ತಮ್ಮಯ್ಯ.—ಲೈನಿಂಗ್ ಮಾಡಿದರೆ ಏನು, ನಾನು ಕೇಳತಕ್ಕ ಪ್ರಶ್ನೆ ಏನೆಂದರೆ ಬೇರೆ ಕಡೆ ಇರತಕ್ಕ ತೋಟಗಳು ಒಣಗದೆ ಸುರಂಗದ ಮೇಲಿರತಕ್ಕವು ಮಾತ್ರ ಏಕೆ ಒಣಗಿವೆ ಎಂದು.

ಶ್ರೀ ಎಂ. ವೀರಪ್ಪ ಮೊಯ್ಲಿ.—ಇಲ್ಲಿರತಕ್ಕ ಪ್ರಶ್ನೆ ಇಷ್ಟೆ : ತೋಟಗಳನ್ನೆಲ್ಲ ಕಡಿದು ಸುರಂಗು ಮಾಡಲಿಲ್ಲ. ಸುರಂಗ ತೋಟಗಳಿಂದ ೮೦೦ ಅಡಿ ದೂರದಲ್ಲಿದೆ. ಮಾನ್ಯ ತಿಮ್ಮಪ್ಪ ಹೆಗಡೆಯವರಂ ಹಾಕಿದ ಪ್ರಶ್ನೆ ಬೇರೆ, ಆದು ಮಾನ್ಯ ತಮ್ಮಯ್ಯನವರಿಗೆ ಅರ್ಥವಾಗಲಿಲ್ಲವೆಂದು ಕಾಣುತ್ತದೆ. ಅವರವರ ತೋಟದ್ದನ್ನು ಅವರವರು ಹೇಳುತ್ತಿದ್ದಾರೆ.

ಶ್ರೀ ಕೆ. ಎಂ. ತಿಮ್ಮಯ್ಯ.—ಅಲ್ಲಿ ಒಣಗಿ ಹೋಗಿವೆ ಅಂದ್ರಲ್ಲ, ಅದರ ಪಕ್ಕದ ತೋಟ ಹಸಿರಾಗಿರುವಾಗ ಇಲ್ಲಿ ಒಣಗಲಿಕ್ಕೆ ಕಾರಣವೇನು ಪರಿಹಾರ ಕೊಡದೆ ಇರುವುದಕ್ಕೆ ಇದನ್ನೆಲ್ಲ ಹೇಳುತ್ತಿದ್ದಾರೆಂದಂನನ್ನ ಭಾವನೆ.

ಶ್ರೀ ಎಲ್. ಟಿ. ತಿಮ್ಮಪ್ಪ ಹೆಗಡ್ಡೆ.—ಸಾಮಾನ್ಯವಾಗಿ ಎಲ್ಲರಿಗೂ ಗೊತ್ತಿರುವ ಹಾಗೆ ಮೇಲ್ಗಡಿ ತೋಟ ಇದ್ದು ಕೆಳಗಡಿ ಟನಲ್ ಹೋದರೆ ಹೇಗೆ ? ಸುರಂಗ ಮಾರ್ಗ ಹೊಡೆದ ಮೇಲೆ ಲೈನಿಂಗ್ ಕೊಡುವವರೆಗೆ ಆ ತೋಟ ಉಳಿಯುತ್ತದೆಯೇ ಈ ಬಗ್ಗೆ ಪವರ್ ಕಾರ್ಪೊರೇಷನ್ನಿನವರಿಗೆ ಬರೆದರೆ ಅವರು ಅದಕ್ಕೆ ಉತ್ತರವನ್ನೂ ಕೊಡುವುದಿಲ್ಲ, ಬಂದು ನೋಡುವುದೂ ಇಲ್ಲ. ಹೀಗಾಗಿ ಸಣ್ಣ ಸಣ್ಣ ಬೆಳೆಗಾರರ ತೋಟಗಳು ಒಣಗಿ ಹಾಳಾಗಿದ್ದಾರೆ. ಆದ್ದರಿಂದ, ತಾವು ದಯವಿಟ್ಟು ಇದನ್ನು ಪರಿಶೀಲಿಸಿ ನೋಡಬೇಕು.

ಶ್ರೀ ಎಂ. ವೀರಪ್ಪ ಮೊಯ್ಲಿ.—ಈ ಪ್ರಶ್ನೆಯಲ್ಲಿ ಎರಡು ಭಾಗಗಳು ಇವೆ. ಒಂದು, ಸುರಂಗ ಇರುವುದರಿಂದ ತೋಟದ ತೇವಾಂಶ ಕಡಿಮೆಯಾಗುತ್ತೆದೆ ಎಂಬುದು, ಆದರೆ ಆ ರೀತಿ ಆಗುವುದಿಲ್ಲ. ಸುರಂಗವನ್ನು ತೋಡುಗುತ್ತಿರುವಾಗ ತೇವಾಂಶ ಕಡಿಮೆ ಯಾಗಿರಬಹುದು. ಆದರೆ ಇನ್ನು ಮುಂದೆ ಆ ರೀತಿ ಆಗುವಂತಹ ಪ್ರಮೇಯ ಅಲ್ಲಿ ಇಲ್ಲ. ಏಕೆಂದರೆ ಅಲ್ಲಿ ಲೈನಿಂಗ್ ಹಾಕಿದ್ದೇವೆ. ಇನ್ನು ಮುಂದೆ ತೋಟಕ್ಕೆ ಯಾವ ಬಾಧ್ಯತೆಯೂ ಆಗುವುದಿಲ್ಲ. ಹಿಂದೆ ಲೈನಿಂಗ್ ಮಾಡುತ್ತಿರುವಾಗ ಆಗಿರಬಹುದು. ಅದಕ್ಕೋಸ್ಕರ ತೋಟ ಹಾಳಾಗಿದೇ ಎಂದು ಹೇಳುತ್ತಿದ್ದಾರೆ. ಅಲ್ಲಿ ಸುರಂಗ ತೋಡಿಕೆ ಮತ್ತು ಲೈನಿಂಗ್ ಕೆಲಸವನ್ನು ಏಕಕಾಲದಲ್ಲೇ ತೆಗೆದುಕೊಳ್ಳಲಾಗಿದೆ. ಆದ್ದರಿಂದ ಈ ಕಾರಣದಿಂದ ಅಲ್ಲಿ ಏನು ತೊಂದರೆಯಾಗಿಲ್ಲವೆಂದು ಅಭಿಪ್ರಾಯಕ್ಕೆ ಪವರ್ ಕಾರ್ಪೊರೇಷನ್‌ನವರು ಬಂದಿದ್ದಾರೆ. ಸುರಂಗ ತೋಡಿದ್ದರಿಂದ ತೋಟ ಹಾಳಾಗಿದೆ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ, ಆದನ್ನು ಪುನರ್ ಪರಿಶೀಲನೆ ಮಾಡಬಹುದು. ಆದರೆ ನಮ್ಮ ವರದಿ ಪ್ರಕಾರ, ನಾವು ಪರಿಶೀಲಿಸಿದ ಪ್ರಕಾರ ಸುರಂಗದಿಂದ ತೋಟವ ಬೆಳೆ ಹಾಳಾಗಿದೆ ಎಂದು ಹೇಳುವುದು ಸರಿಯಲ್ಲ.

ಶ್ರೀ ಎಲ್. ಟಿ. ತಿಮ್ಮಪ್ಪ ಹೆಗಡೆ.—ಇನ್ಸ್‌ಪೆಕ್ಷನ್ ಮಾಡಿ ತೀರ್ಮಾನ ಮಾಡಲಿ.

ಅಧ್ಯಕ್ಷರು.—ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದಾರಲ್ಲ.